OS:395/2014
Pw.1

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಚಿಕ್ಕೋಡಿ.

ಸಾಕ್ಷಿಯನ್ನು ದಿನಾಂಕ 22-08-2025 ರಂದು ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀಸವಾಲು- ಪ್ರತಿವಾದಿ ಪರ ವಕೀಲರಿಂದಃ

8) ನಾನು EP ಯಲ್ಲಿ ನನಗೂ ಶೇರ ಇದೆ ನನ್ನನ್ನು ಸಹ ಪಕ್ಷಗಾರನಾಗಿ ಮಾಡಿ ಎಂದು ದಾಖಲಿಸಿರುವ ಅರ್ಜಿಯು ಇನ್ನೂ ಇತ್ಯರ್ಥ ಹಂತದಲ್ಲಿರುತ್ತದೆ ಎಂದರೆ ಸರಿ. ಅದೇ ರೀತಿ ಇಪಿಯಲ್ಲಿ ಕಂಟೆಪ್ಟ್ ಪ್ರೊಸಿಡಿಂಗ ಆಗುತ್ತದೆ ಎಂದು ಹೇಳಿ ದಾಖಲಿಸಿರುವ ಅರ್ಜಿಯು ಸಹ ಇನ್ನೂ ಇತ್ಯರ್ಥ ಹಂತದಲ್ಲಿರುತ್ತದೆ ಎಂದರೆ ಸರಿ. ಅದೇ ರೀತಿ ಇಪಿ 6/2016 ರಲ್ಲಿ ಪ್ರೊಸಿಡಿಂಗ್ಸ ಸ್ಟೆ ಮಾಡಬೇಕೆಂದು ಎಂದು ಹಾಕಿರುವ ಅರ್ಜಿಯು ಸಹ ನಿಕಾಲ ಆಗಿರುವುದಿಲ್ಲ ಎಂದರೆ ಸರಿ. ಸದರಿ ಇಪಿಯಲ್ಲಿ ನಾನು ಮಹಾದೇವ ಮಾಡಿಕೊಂಡಿರುವಂತಹ ಅಪಸಾತ ಅರ್ಜಿಯನ್ನು ಹಾಜರು ಮಾಡಿದ್ದೆನೆ ಎಂದರೆ ಸರಿ. ಶಂಕರ ರವರ ಖರೀದಿ ಪತ್ರವನ್ನು ಸಹ ನಾನು ಇಪಿಯಲ್ಲಿ ಹಾಜರು ಮಾಡಿದ್ದೆ ಎಂದರೆ ಸರಿ. ಈ ಎಲ್ಲಾ ಪ್ರಕ್ರಿಯೆ 2016 ನಂತರ ಆಗಿರುತ್ತದೆ ಎಂದರೆ ಸರಿ. ನಕಾಶೆ ತೆಗೆಯಲು ಅರ್ಜಿ ಕೊಡುವಾಗ ಮಕಬುಲ ಮತ್ತು ಪ್ರತಿವಾದಿಗಳಿಗೆ ನೋಟಿಸ ಕೊಟ್ಟಿದ್ದಿರಾ ಎಂದರೆ ಇಲ್ಲಾ.

9) ದಾವಾ ಆಸ್ತಿ ಮೂಲ 13 ಎಕರೆಯ ಒಂದೇ ಪಟ್ಟಿ ಇತ್ತು ಎಂದರೆ ಮೂರು ಜನ ಸಹೋದರರು ಡಿವೈಡ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಯವಾಗ ಮತ್ತು ಹೇಗೆ ಪಾಲು ಮಾಡಿಕೊಂಡಿದ್ದಾರೆಂದು ನಾನು ಚೌಕಾಶಿ ಮಾಡಿಲ್ಲ. ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ನಿಮ್ಮ ಪಾಲು ಹೇಗೆ ಇದ್ದು ಎಂದು ನಾನು ಅವರ ಬಳಿ ಚೌಕಶಿ ಮಾಡಿರುತ್ತೆನೆ. ದುಂಡಪ್ಪಾ, ಬೀರೆಶ, ಜ್ಞಾನಪ್ಪಾ ರವರು 1980 ರಲ್ಲಿ ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಾಲುನಲ್ಲಿ ದುಂಡಪ್ಪನಿಗೆ 4 ಎಕರೆ 13 ಗುಂಟೆ, ಬೀರೇಶನಿಗೆ 4 ಎಕರೆ 13 ಗುಂಟೆ, ಜ್ಞಾನಪ್ಪನಿಗೆ 4 ಎಕರೆ 16 ಗುಂಟೆ ಪಾಲು ಬಂದಿದ್ದು ಅದರಲ್ಲಿ ಅವರು ಪ್ರತ್ಯಕವಾಗಿ ವಹಿವಾಟ ಮಾಡಿಕೊಂರುತ್ತಾರೆ ಎಂದರೆ ಸರಿ. ಪಾಲದಂತೆ ವರದಿ ಕೊಟ್ಟು ಅವರು ಡೈರಿಯನ್ನು ಸಹ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದುಂಡಪ್ಪನ ಆಸ್ತಿಗೆ ಸರ್ವೆ ನಂ. 172/2ಅ ಬೀರೇಶನ ಆಸ್ತಿಗೆ ಸರ್ವೆ ನಂ. 172/2ಬ ಮತ್ತು ಜ್ಞಾನಪ್ಪ ರವರ ಆಸ್ತಿಗೆ ಸರ್ವೆ ನಂ. 172/2ಸಿ ಎಂದು ಪ್ರತ್ಯಕವಾಗಿ ನಂಬರ ಬಂದಿರುತ್ತವೆ ಎಂದರೆ ಸರಿ. 13 ಎಕರೆ ಪಟ್ಟಿಯ ಪೂರ್ವ ಬಾಜುವಿಗೆ ದುಂಡಪ್ಪಾ ಪಶ್ಚಿಮ ಬಾಜುವಿಗೆ ಜ್ಞಾನಪ್ಪಾ ಮತ್ತು ಮಧ್ಯ ಬೀರೇಶ ರವರ ಜಮೀನುಗಳು ಬರುತ್ತವೆ ಎಂದರೆ ಸರಿ ಅಲ್ಲ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ. ಅವರದು ಪೂರ್ವ ಪಶ್ಚಿಮ ಪಟ್ಟಿ ಇದ್ದರು ಸಹ ದಕ್ಷಿಣೋತ್ತರವಾಗಿ ಇವೆ ಎಂದು ಇಪಿ ಎಕ್ಸಿಕ್ಯೂಟ ಮಾಡಬಾರದೆಂದು ಇಪಿಯಲ್ಲಿ ನಾನು ಈಗ ತೋರಿಸಿದ ನಕಾಶೆಯನ್ನು ಹಾಜರು ಮಾಡಿರುತ್ತೆನೆ ಎಂದರೆ ಅದನ್ನು ನೋಡಿ ಸರಿ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ವಕೀಲರು ಮಾಹಿತಿ ನೀಡಿದಂತೆ ಮಾಡಿರುತ್ತೆನೆ

ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ನಕಾಶೆಯನ್ನು ಒಪ್ಪಿದಕ್ಕಾಗಿ ಅದನ್ನು ನಿಡಿ 1 ಎಂದು ಗುರುತಿಸಲಾಯಿತು.

10) ಮಹಾದೇವ ಶಿವಲಿಂಗ ಇಟ್ಟಿ ಮತ್ತು ಶಂಕರ ಶಿವಲಿಂಗ ಇಟ್ಟಿ ರವರ ಮೂಲಕ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತೆನೆ ಎಂದರೆ ಸರಿ. ಅದರಲ್ಲಿ ಸ್ಟೆ ಪಡೆದುಕೊಂಡಿರುತ್ತೆನೆ ಎಂದರೆ ಸರಿ. ಅವರು ಇಪಿಯನ್ನು ಎಕ್ಸಿಕ್ಯೂಟ ಮಾಡಬಾರದೆಂದು ಡಬ್ಲೂಪಿ ಹಾಕಿ ಮನಾಯಿ ಪಡೆದುಕೊಂಡು ಕಾನೂನು ಬಾಹಿರವಾಗಿ ಪ್ರಸ್ತುತ ಪ್ರಕರಣ ನಡೆಸುತ್ತಿದ್ದೆನೆಂದರೆ ಸರಿ ಅಲ್ಲ. ಪಟ್ಟಿಗಳು ಪೂರ್ವಪಶ್ಚಿಮವಾಗಿಲ್ಲ ದಕ್ಷಿಣೋತ್ತರವಾಗಿದ್ದಾವೆಂದು ಒಂದೇ ಉದ್ದೇಶಕ್ಕೆ ನಾವು ಉಚ್ಚ ನ್ಯಾಯಾಲಯ ಹೋಗಿರುತ್ತೆವೆ ಎಂದರೆ ಪಟ್ಟಿಗಳು ಪೂರ್ವಪಶ್ಚಿಮವಾಗಿಯೇ ಇರುತ್ತವೆ ಎಂದು ನುಡಿಯುತ್ತಾರೆ. 1989 ರಲ್ಲಿ ಜ್ಞಾನಪ್ಪಾ, ದುಂಡೇಪ್ಪಾ, ಬೀರೇಶ ರವರು ಡೈರಿ ಮಾಡಿಕೊಂಡಿರುತ್ತಾರೆ ಎಂದು ತೋರಿಸಿದ್ದು ನನಗೆ ಅಕ್ಷರ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಈ ಡೈರಿ ಪ್ರಕಾರ ಅವರು ಯಾವ ರೀತಿಯಲ್ಲಿ ಕಬ್ಜಾ ವಹಿಟವಾದಲ್ಲಿ ಇರುತ್ತಾರೆ ಎಂದು ಗೋತ್ತಿದ್ದರು ಸಹ ಅಕ್ಷರ ಕಾಣುತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

11) ದಿಃ19-12-2010 ರಂದು ಬಿರೇಶ ಮಕಬೂಲ ರವರಿಗೆ ಖರೀದಿ ಕರಾರು ಪತ್ರ ಬರೆದು ಕೊಟ್ಟಿದ್ದರು ಎಂದರೆ ಸರಿ ಅಲ್ಲ. ಆ ಕರಾರು ಪತ್ರದ ಪ್ರಕಾರ ಅಸಲ ದಾವಾ ನಂ. 160/2014 ರಂತೆ ಡಿಕ್ರಿ ಆಗಿರುತ್ತದೆ ಎಂದರೆ ಸರಿ ಅಲ್ಲ. ಕರಾರು ಪತ್ರ ಮತ್ತು ಡಿಕ್ರಿ ಪ್ರಕಾರ ಬೀರೇಶ ಖರೀದಿ ಕೊಡಬಾರದು ಅನ್ನುವ ಉದ್ದೇಶದಿಂದ ನಾನು ಮತ್ತು ನನ್ನ ಸಹೋದರರು ನಮಗೆ ಬೇಕಾಗುವ ರೀತಿಯಲ್ಲಿ 11ಇ ನಕ್ಷೆಯನ್ನು ತಯಾರಿಸಿಕೊಂಡಿರುತ್ತೆವೆ ಎಂದರೆ ಸರಿ ಅಲ್ಲ. ನಾವೆಲ್ಲ ದಾಖಲಾತಿಗಳನ್ನು 2014 ರ ಡಿಕ್ರಿ ಆದ ನಂತರ ಮಾಡಿಕೊಂಡಿರುತ್ತೆವೆ ಎಂದರೆ ಸರಿ ಅಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.